# ನಂಬಿ ಕೆಟ್ಟವರಿಲ್ಲ

**■ ಭೋಜರಾಜ ಸೊಪ್ಪಿಮಠ**

ಕಲೆ: ಸಂತೋಷ್ ಸಸಿಹಿತ್ಲು



ರಾಮಗಿರಿ ಎಂಬುದೊಂದು ಊರು. ಅಲ್ಲಿ ಯಂಕಪ್ಪನೆಂಬ ಕೃಷಿಕನಿದ್ದನು. ಆತನಿಗೆ ಸಾಕಷ್ಟು ಜಮೀನು ಇತ್ತು. ಅದರಲ್ಲಿ ಎಲ್ಲಾ ರೀತಿಯ ಬೆಳೆಗಳನ್ನು ಬೆಳೆದು ಜೀವನಕ್ಕೆ ಯಾವುದೇ ತೊಂದರೆ ಇರದಂತೆ ಜೀವಿಸುತ್ತಿದ್ದ. ಆತನಿಗೆ ಕುಮಾರ ಮತ್ತು ಶ್ರೀನಿವಾಸ ಎಂಬ ಇಬ್ಬರು ಮಕ್ಕಳಿದ್ದರು. ಮಕ್ಕಳಿಗೆ ಓದಲು ಶಾಲೆಗೆ ಕಳುಹಿಸಿದ. ಕಲಿಕೆಯಲ್ಲಿ ಆಸಕ್ತಿ ತೋರಿದ ಇಬ್ಬರೂ ಚೆನ್ನಾಗಿ ಅಭ್ಯಾಸ ಮಾಡತೊಡಗಿದರು. ಪ್ರತಿವರ್ಷ ಶಾಲೆಗೆ ಮೊದಲಿಗರಾಗಿ ತೇರ್ಗಡೆಯಾಗುತ್ತಿದ್ದರು. ಇದು ಯಂಕಪ್ಪನಿಗೆ ಹೆಮ್ಮೆ ಎನಿಸುತ್ತಿತ್ತು.

ಪ್ರೌಢ ಶಿಕ್ಷಣವನ್ನು ಮುಗಿಸಿದ ಮಕ್ಕಳು ಕಾಲೇಜ್ ಅಭ್ಯಾಸಕ್ಕೆಂದು ದೊಡ್ಡ ಊರಿಗೆ ಹೋಗಬೇಕಾಯಿತು. ಈಗ ಯಂಕಪ್ಪ ಉಭಯ ಸಂಕಟದಲ್ಲಿ ಬಿದ್ದ. ಓದಿನಲ್ಲಿ ಜಾಣರಿದ್ದ ಮಕ್ಕಳನ್ನು ಮುಂದೆ ಓದಿಸಬೇಕಾದುದು ತನ್ನ ಧರ್ಮ. ಅವರು ಹೆಚ್ಚು ಓದುತ್ತಾ ಹೋದಂತೆಲ್ಲಾ ಪೇಟೆ ಜೀವನಕ್ಕೆ ರೂಢಿಯಾಗಿ ಮರಳಿ ಹಳ್ಳಿಗೆ ಬರದಂತಾಗಿ ಬಿಟ್ಟರೆ? ಕೃಷಿಕ ವೃತ್ತಿಯನ್ನು ಮುಂದುವರೆಸದಂತೆ ನಿಲ್ಲಿಸಿ ಬಿಟ್ಟರೆ? ಅಷ್ಟು ಭೂಮಿಯನ್ನು ಹೇಗೆ ಸಾಗುವಳಿ ಮಾಡುವುದು ಎಂದು ಚಿಂತೆಯಲ್ಲಿಯೇ ಬೇಡವಾದ ಮನಸ್ಸಿನಿಂದಲೇ ಅವರನ್ನು ಓದಲು ನಗರಕ್ಕೆ ಕಳುಹಿಸಿಕೊಟ್ಟ.

ದಿನಗಳು ಉರುಳಿದಂತೆ ಹೊಸ ಜೀವನಕ್ಕೆ ಹೊಂದಿಕೊಂಡ ಕುಮಾರ ಮತ್ತು ಶ್ರೀನಿವಾಸ ಚೆನ್ನಾಗಿ ಓದಿ ಒಳ್ಳೆಯ ಶ್ರೇಣಿಯಲ್ಲಿ ತೇರ್ಗಡೆಯಾದರು. ಓದು ಮುಗಿದ ತಕ್ಷಣ ಊರಿಗೆ ಹೋಗಬೇಕಾಗಿ ಬಂದಾಗ ಕೆಲಸ ಹುಡುಕಲು ಪ್ರಾರಂಭಿಸಿದರು. ಅವರಿಬ್ಬರಿಗೂ ಮರಳಿ ಊರಿಗೆ ಹೋಗಲು ಇಚ್ಛೆ ಇರಲಿಲ್ಲ. ಹಾಗಿರುವಾಗಲೇ ಅವರಿಬ್ಬರಿಗೂ ಒಂದೊಂದು ಕಡೆ ಕೆಲಸ ಸಿಕ್ಕಿತು. ಬೇರೆ ಕಡೆ ಕೆಲಸವಾದುದರಿಂದ ಅವರು ವಾಸ ಮಾಡುವ ಸ್ಥಳವೂ ಬೇರೆಯಾಯಿತು. ಅವಕಾಶ ಸಿಕ್ಕಾಗಲೆಲ್ಲಾ ಇಬ್ಬರೂ ಭೇಟಿಯಾಗುತ್ತಿದ್ದರು.

ಮಕ್ಕಳು ತನ್ನಿಂದ ದೂರವಾದರೆಂಬ ಕೊರಗಿನಿಂದಲೇ ಯಂಕಪ್ಪ ಅನಾರೋಗ್ಯ ಪೀಡಿತನಾದ. ಅವನಿಗೆ ತಾನು ಹೆಚ್ಚು ದಿನ ಬದುಕಲಾರೆ ಎಂದು ಮನವರಿಕೆಯಾಯಿತು. ತನ್ನಿಬ್ಬರೂ ಮಕ್ಕಳಿಗೆ ಹೇಳಿ ಕಳುಹಿಸಿದ. ಅಪ್ಪ ಅವಸರವಾಗಿ ಬಂದು ನೋಡಬೇಕೆಂದು ಹೇಳಿ ಕಳುಹಿಸಿದಾಗ ಇಬ್ಬರೂ ಧಾವಿಸಿ ಬಂದರು. ಮಕ್ಕಳನ್ನು ಪಕ್ಕದಲ್ಲಿ ಕೂರಿಸಿಕೊಂಡು 'ನನಗಿನ್ನು ವಯಸ್ಸಾಯಿತು. ಅನಾರೋಗ್ಯವೂ ಬೆನ್ನು ಹತ್ತಿದೆ. ಹೀಗಾಗಿ ನಾನು ಹೆಚ್ಚು ದಿನ ಬದುಕಲಾರೆ. ನನ್ನ ಆಸೆ ಏನೆಂದರೆ ಅಷ್ಟೊಂದು ಕೃಷಿ ಭೂಮಿ ಇದೆ. ಅದನ್ನು ನೀವು ಸಾಗುವಳಿ ಮಾಡಿಕೊಂಡು ಹೋದರೆ ಒಳ್ಳೆಯದು. ಇಲ್ಲದಿದ್ದರೆ ಪಾಳು ಬಿದ್ದು ಏನೂ ಉಪಯೋಗವಿಲ್ಲದಂತಾಗಿ ವ್ಯರ್ಥವಾಗುತ್ತದೆ. ನಂಬಿ ದುಡಿದವರನ್ನು ಎಂದೂ ಭೂಮಿ ತಾಯಿ ಕೈ ಬಿಟ್ಟಿಲ್ಲ. ಸ್ವಲ್ಪಮಟ್ಟಿನ ಹಣಕ್ಕಾಗಿ ಇನ್ನೊಬ್ಬರ ಕೈಕೆಳಗೆ ಕೆಲಸ ಮಾಡಿಕೊಂಡು ಇರುವುದು ನನಗೇಕೋ ಸರಿ ಎನ್ನಿಸುತ್ತಿಲ್ಲ. ಅದಕ್ಕೆ ನೀವಿಬ್ಬರೂ ಊರಿಗೆ ಬನ್ನಿ. ಕೃಷಿ ಕೆಲಸ ಮಾಡಿ. ಇದಕ್ಕಿಂತ ಹೆಚ್ಚಿನ ಆಸೆ ನನಗೇನೂ ಇಲ್ಲ' ಎಂದ. ತನ್ನ ಅಪ್ಪನ ಮಾತಿಗೆ ಇಬ್ಬರೂ ಒಪ್ಪಿಕೊಂಡರು. ಕೆಲ ದಿನಗಳಲ್ಲಿಯೇ ಯಂಕಪ್ಪ ಅಸುನೀಗಿದ.

ಕ್ರಿಯಾದಿಗಳನ್ನೆಲ್ಲಾ ಮುಗಿಸಿಯಾದ ಮೇಲೆ ಕುಮಾರ ತಂದೆಯ ಮಾತಿನಂತೆ ಊರಲ್ಲಿಯೇ ಇರಲು ನಿಶ್ಚಯಿಸಿದರೆ ಶ್ರೀನಿವಾಸ ಕೃಷಿಯ ಬಗ್ಗೆ ಒಲವಿರದೇ ಮತ್ತೆ ಪಟ್ಟಣ ಸೇರಿದ. ಇಲ್ಲಿಯೇ ಇದ್ದು ಅಪ್ಪನ ಮಾತನ್ನು ನೆರವೇರಿಸೋಣ ಎಂದ ಕುಮಾರನ ಮಾತನ್ನು ಕೂಡ ಕೇಳದೆ ಪಟ್ಟಣಕ್ಕೆ ಬಂದಿದ್ದ ಶ್ರೀನಿವಾಸ ಕೆಲ ದಿನಗಳವರೆಗೆ ಚೆನ್ನಾಗಿಯೇ ಇದ್ದ. ನಗರದ ಗತ್ತಿನ ಜೀವನ ಅವನಿಗೆ ಸೊಗಸಾಗಿ ಕಂಡಿತ್ತು. ಕುಮಾರ ಕೃಷಿಯಲ್ಲಿಯೇ ನಿಯತ್ತಿನಿಂದ ದುಡಿಯತೊಡಗಿದ. ಫಲವತ್ತಾದ ಭೂಮಿಯಲ್ಲಿ ಬಂಗಾರದಂತಹ ಬೆಳೆ ಬೆಳೆದ. ಕೈ ತುಂಬಾ ಹಣ ಬಂದಿತು. ಇವನೂ ತನ್ನ ಕೆಲಸದಲ್ಲಿ ಸುಖವಾಗಿದ್ದ.

ಕ್ರಮೇಣ ದಿನಗಳು ಉರುಳಿದವು. ಶ್ರೀನಿವಾಸ ಕೆಲಸ ಮಾಡುತ್ತಿದ್ದ ಕಾರ್ಖಾನೆ ಕೆಲ ಕಾರಣಗಳಿಂದ ನಿಂತು ಹೋಯಿತು. ಅವನಿಗೆ ದಿಕ್ಕೇ ತೋಚದಾಯಿತು. ಬೇರೆ ಕೆಲಸ ಮಾಡಲು ಗೊತ್ತಿರಲಿಲ್ಲ. ಎಲ್ಲೂ ತನಗೆ ಬೇಕಾಗುವಂತಹ ಕೆಲಸ ಸಿಗಲಿಲ್ಲ. ಅನಿವಾರ್ಯವಾಗಿ ಊರಿಗೆ ಮರಳಬೇಕಾಯಿತು. ಕುಮಾರನಲ್ಲಿಗೆ ಬಂದು ತನ್ನ ಸ್ಥಿತಿಯನ್ನು ಹೇಳಿಕೊಂಡ. 'ಅಣ್ಣಾ, ನನಗಾದರೂ ಪಟ್ಟಣದಿಂದ ಬಂದ ಕೂಡಲೇ ಕೃಷಿಯಲ್ಲಿ ಯಾವುದೇ ಅನುಭವ ಇರಲಿಲ್ಲ. ಹಾಗಂತ ನಾನು ಸುಮ್ಮನೇ ಕೂಡಲಿಲ್ಲ. ಒಂದೊಂದಾಗಿ ಕಲಿಯತೊಡಗಿದೆ. ಅದರ ಪ್ರತಿಫಲವಾಗಿಯೇ ನಾನು ಇಂದು ಈ ಮಟ್ಟದಲ್ಲಿ ಬೆಳೆದಿರೋದು. ಮನುಷ್ಯ ನಿರ್ಮಿಸಿದ ಕಾರ್ಖಾನೆ ಕೊಡುವ ಕೆಲಸ ಒಂದು ಹಂತದವರೆಗೆ. ಆದರೆ ಭೂಮಿ ತಾಯಿ ಕೊಡುವ ಕೆಲಸವಿದೆಯಲ್ಲ, ಅದು ನಮ್ಮ ಜೀವನ ಇರುವವರೆಗೆ ಇರುತ್ತದೆ. ಇದನ್ನು ನಂಬಿದವರಿಗೆ ಎಂದಿಗೂ ಮೋಸವಾಗುವುದಿಲ್ಲ ಎಂದು ಅಪ್ಪ ಹೇಳಿದ ಮಾತು ಸತ್ಯವಾಗಿಯೇ ಇದೆ. ಇಲ್ಲಿ ನನ್ನೊಂದಿಗೆ ಜೊತೆಯಾಗಿರು. ಇಬ್ಬರೂ ಸೇರಿ ಏನಾದರೂ ಸಾಧಿಸೋಣ. ನಮ್ಮ ಜೀವನಕ್ಕೆ ಒಂದು ದಾರಿ ಕಂಡುಕೊಳ್ಳುವುದಲ್ಲದೆ ಅಪ್ಪನ ಮಾತನ್ನು ನಡೆಸಿ ಕೊಟ್ಟಂತಾಗುತ್ತದೆ' ಎಂದ. ಅದನ್ನು ಕೇಳಿ ಶ್ರೀನಿವಾಸನಿಗೆ ಖುಷಿಯಾಯಿತು.

ಇಬ್ಬರೂ ಸೇರಿ ದುಡಿಯತೊಡಗಿದರು. ಅವರ ದುಡಿಮೆಗೆ ತಕ್ಕಂತೆ ಬೆಳೆಯೂ ಬರತೊಡಗಿತು. ಯಾವೊಂದೂ ಭೇದಭಾವ ಮಾಡದೆ ಇಬ್ಬರೂ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ದುಡಿದುದರ ಪ್ರತಿಫಲವಾಗಿ ಒಳ್ಳೆಯ ಸ್ಥಿತಿವಂತರಾದರು. ಕಷ್ಟಪಟ್ಟು ಮಾಡಿದ ಯಾವುದೇ ಕೆಲಸಕ್ಕೆ ಮೋಸವಿಲ್ಲ ಎಂಬ ಸತ್ಯವನ್ನು ಬೇರೆಯವರಿಗೆ ತೋರಿಸಿ ಕೊಟ್ಟರು. ■